ಊಹಿಸಿ ನಗು ಬಂತು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೇ ಆದರೂ ಅಲ್ಲಿನ ಸಿಬ್ಬಂದಿಯ ಆಂಗ್ಲ ಭಾಷೆ ಅತ್ಯಂತ ಮಿತವಾಗಿತ್ತು. ಒಂದೇ ದಿನದಲ್ಲಿ ಸಿಯೋಲ್‌ನಿಂದ ಮತ್ತೊಂದು ವಿಮಾನವೇರಿ ಡೇಗು ಎನ್ನುವ ದೊಡ್ಡದೊಂದು ನಗರವನ್ನು ತಲುಪಿದೆವು. ಅಲ್ಲಿನ ಐಷಾರಾಮಿ ಹೋಟೆಲೊಂದನ್ನು ತಂಗುದಾಣವಾಗಿಸಿಕೊಂಡು ದಕ್ಷಿಣ ಕೊರಿಯಾದ ಎರಡನೇ ದೊಡ್ಡ ನಗರ ಬೂಸಾನ್‌ಗೆ ಪ್ರವಾಸ ಹೋದೆವು.

ಏನಾಶ್ಚರ್ಯ!

ಕೈಗಾರಿಕಾ ಕಟ್ಟಡಗಳಿಂದ ತುಂಬಿಹೋಗಿರಬಹುದು ಎಂದುಕೊಂಡ ಈ ದೇಶದ ಶೇಕಡ 70ರಷ್ಟು ಭೂ ಭಾಗ ಹಚ್ಚ ಹಸುರಿನ ಕಾಡುಗಳಿಂದ ತುಂಬಿದ ಗಿರಿಪರ್ವತಗಳ ಸಾಲು ಸಾಲು ಸರಣಿಗಳಿಂದ ತುಂಬಿಹೋಗಿದೆ. ಕೇವಲ ಶೇ30ರಷ್ಟು ನೆಲದಲ್ಲಿ ಮನೆಮಾಡಿರುವ ದಕ್ಷಿಣ ಕೊರಿಯನ್ನರು ಈ ಸರಣಿ ಪರ್ವತಗಳ ತಪ್ಪಲು ಅಥವಾ ಮಡಿಲಿನಲ್ಲಿ ಮನೆಮಾಡಿಕೊಂಡಿದ್ದಾರೆ. ಸಮತಟ್ಟಾದ ಜಾಗದಲ್ಲಿರುವ ನಗರಗಳಲ್ಲಿ ಗಗನಚುಂಬಿ ಅಪಾರ್ಟ್‌ಮೆಂಟುಗಳಲ್ಲಿ ಬಹುತೇಕರು ವಾಸಮಾಡುತ್ತಾರೆ. ಇಷ್ಟು ಪುಟ್ಟ ದೇಶ ತನ್ನ ಕೈಗಾರಿಕೋದ್ಯಮಗಳಿಂದ ಇಡೀ ಪ್ರಪಂಚಕ್ಕೆ ತಮ್ಮ ಸರಕನ್ನು ಮಾರುತ್ತಾರೆ ಎಂದು ಮನವರಿಕೆಯಾಗಿ ಅವರ ಬಗೆಗಿನ ಮೆಚ್ಚುಗೆ ದುಪ್ಪಟ್ಟಾಯಿತು.

ಸುತ್ತಮುತ್ತಲಿನ ಹಸಿರು ನೋಟಗಳನ್ನು ಕಣ್ತುಂಬಿಕೊಳ್ಳುತ್ತ ಮೈಮರೆತಿರುವಾಗ ನಮ್ಮ ಪ್ರವಾಸೀ ಮಾರ್ಗದರ್ಶಿ ತನ್ನ ಜೋಕುಗಳಿಗೆ ತಾನೇ ನಗುತ್ತ ಅವರ ದೀರ್ಘ ಹೋರಾಟದ ಇತಿಹಾಸದ ಪುಟಗಳಿಗೆ ಹೊರಳಿದಳು. ನಾವು ಮತ್ತೆ ಇಹಕ್ಕೆ ಮರಳಿದೆವು, ಕೇವಲ 75 ವರ್ಷಗಳ ಹಿಂದೆ ಬರಡು ನೆಲವಾಗಿದ್ದ, ಬೋಳುಗುಡ್ಡ, ಬೆಟ್ಟಗಳಿಂದ ತುಂಬಿದ್ದ ದಕ್ಷಿಣ ಕೊರಿಯಾ ಯುದ್ಧಗಳಲ್ಲಿ ಬಸವಳಿದು ನಲುಗಿದ್ದ ಒಂದು ಪುಟ್ಟ ನೆಲವಾಗಿತ್ತು. ಇತಿಹಾಸದ ಬರ್ಬರ ಯುದ್ಧಗಳು, ಪಿತೂರಿಗಳು, ರಾಜಕೀಯ ತಲ್ಲಣಗಳಲ್ಲಿ ಬಸವಳಿದು ಮರು ಹುಟ್ಟಿಗಾಗಿ ಹಂಬಲಿಸುತ್ತ ಅವನತಿಯತ್ತ ಸಾಗಿತ್ತು.

ಸಣ್ಣ ಕಣ್ಣುಗಳ, ಬತ್ತಿದ ಮುಖಗಳ, ಸಪೂರ ದೇಹದ, ಲಘು ನಿಲುವಿನ ಈ ವಿನಯವಂತ ಜನರು ವಜ್ರದಷ್ಟೇ ಕಠಿಣ ಧ್ಯೇಯಗಳಿಂದ, ಅಲುಗಿಸಲಾಗದ ನಿಷ್ಠೆಯಿಂದ, ಕಷ್ಟಕಾರ್ಪಣ್ಯದ ಬದುಕನ್ನು ನಡೆಸುತ್ತ ದಕ್ಷಿಣ ಕೊರಿಯಾದಂತಹ ಒಂದು ಮುಂದುವರೆದ ದೇಶವನ್ನು ಅಂಗೈಯಗಲದ ಈ ಭೂಮಿಯಲ್ಲಿ ಸೃಷ್ಟಿಸಿದ್ದಾದರೂ ಹೇಗೆ? ಬಗಲಿನಲ್ಲೇ ಇರುವ ಸರ್ವಾಧಿಕಾರಿ ಮಲ ಸಹೋದರ ದೇಶದ ಯುದ್ಧದ ಮಾತು, ಅವಿರತ ಒತ್ತಡಗಳು, ಅನೇಕ ಒಪ್ಪಂದಗಳು, ಸತತ ಬೆದರಿಕೆಗಳ ನೆರಳಲ್ಲೇ ಪ್ರಜಾಪ್ರಭುತ್ವದ ಆಳ್ವಿಕೆ ಹೊಂದಿರುವ ಪುಟ್ಟ ದೇಶ ದಕ್ಷಿಣ ಕೊರಿಯಾ ಜಗತ್ತಿನ ಒಂದು ದೊಡ್ಡ ಅಚ್ಚರಿ.

ಜೀವನವನ್ನು ಸುಲಭಗೊಳಿಸಲು ಬಳಸಬಹುದಾದ ಉತ್ಕೃಷ್ಟ ಗುಣಮಟ್ಟದ ಸಾಧನಗಳನ್ನು (ಇದೇ ಮಾತನ್ನು ಬೃಹತ್ ಚೀನಾ ದೇಶದ ಎಲ್ಲ ಉತ್ಪನ್ನಗಳಿಗೆ ಹೇಳುವಂತಿಲ್ಲ ಎಂಬುದನ್ನು ನೆನಪಿಸಿಕೊಳ್ಳಿ) ಜಗತ್ತಿಗೆಲ್ಲ ಮಾರುತ್ತ,





ಒಳಾಂಗಣ ಮೀನು ಮಾರುಕಟ್ಟೆಯ ನೋಟ

ತಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಈ ದೇಶ ಅತ್ಯಂತ ನಾಜೂಕಿನಿಂದ ಕಟ್ಟುಕೊಂಡಿರುವುದನ್ನು ನೋಡುವುದು ಕಣ್ತೆರುಸುವಂತಿತ್ತು.

‘ಇಲ್ಲಿನ ಕುಟುಂಬಗಳಲ್ಲಿ ತಂದೆ ತಾಯಿ ಇಬ್ಬರೂ ದುಡಿಯುತ್ತಾರೆ, ಪ್ರತಿ ಪೈಸೆ ಉಳಿಸಿ ಮಕ್ಕಳಿಗೆ ಉನ್ನತ ವ್ಯಾಸಂಗ ಕೊಡಿಸಲು ಶ್ರಮಿಸುತ್ತಾರೆ’ ಎಂದು ಪ್ರವಾಸಿ ಮಾರ್ಗದರ್ಶಿ ಹೇಳುತ್ತ ಹೋದಳು.

ಹಲವಾರು ದಿನಗಳ ನಮ್ಮ ಪ್ರವಾಸದಲ್ಲಿ ರಸ್ತೆ ಬದಿಯಲ್ಲಿ ಕಸಕಡ್ಡಿ ಗಲೀಜು ಇದ್ದದ್ದನ್ನು ಕಾಣಲಿಲ್ಲ. ಅದಕ್ಕಿಂತ ಹೆಚ್ಚಾಗಿ ‘ದಪ್ಪಗಿದ್ದಾರೆ’ ಎನ್ನಬಹುದಾದ ಒಬ್ಬನೇ ಒಬ್ಬ ಪ್ರಜೆಯನ್ನು ನಾವು ಕಾಣಲಿಲ್ಲ. ಇಲ್ಲಿನವರು ತಮ್ಮ ದೇಹದ ರೂಪಿಗೆ, ತ್ವಚೆಗೆ, ಸೌಂದರ್ಯಕ್ಕೆ ಬಹಳ ಒತ್ತು ನೀಡುತ್ತಾರೆ. ಬಸವನ ಹುಳದ ಲೋಳೆ ಅಂಟನ್ನು ಬಳಸಿ ಮಾಡುವ ಅವರ ಸೌಂದರ್ಯ ಪ್ರಸಾಧನ ಬಹು ಪ್ರಸಿದ್ಧ. ಆರೋಗ್ಯಕ್ಕಾಗಿ ಜಿಂಗ್ಸೆನ್ ಬೇರನ್ನು ಅವರು ಹಲವು ವಿಧಗಳಲ್ಲಿ ಸೇವಿಸುತ್ತಾರೆ.

ಮಾರ್ಗದರ್ಶಿಗಳ ಇಂಗ್ಲಿಷ್ ಭಾಷೆ ಅರ್ಥವಾಗುವಂತಿತ್ತು. ಆದರೆ ಬಹುತೇಕ ದಕ್ಷಿಣ ಕೊರಿಯನ್ನರಿಗೆ ಆಂಗ್ಲ ಭಾಷೆಯ ಗಾಳಿ ಗಂಧವಿಲ್ಲ. ಅಂತಹ ಕೊರಿಯನ್ನರ ಜೊತೆ ಸಂಭಾಷಿಸುವುದು ಅತ್ಯಂತ ಕಷ್ಟವೆನಿಸಿತು. ಅರ್ಥವಾಗದಿದ್ದಾಗ ಅವರ ನಡವಳಿಕೆ ‘ಒರಟು’ ಎನ್ನಿಸಬಹುದು. ಇಂಗ್ಲಿಷರಂತೆ ಮಾತು ಮಾತಿಗೆ ನಗೆಚಾಟಿಕೆ ಹಾರಿಸುವುದು ಇವರಿಗೆ ತಿಳಿದಿಲ್ಲ. ಪ್ರವಾಸಿಗರನ್ನು ಸುಲಿಯುವ ಚಾಳಿಯೂ ಅವರಲ್ಲಿ ಕಂಡುಬರಲಿಲ್ಲ.

ಅಪ್ಪಟ ದೇಶೀ ಖಾದ್ಯವನ್ನು ಸವಿಯಲು ನಗರದ ಮಧ್ಯಭಾಗದಲ್ಲಿದ್ದ ಒಂದು ರೆಸ್ಟೋರೆಂಟಿಗೆ ಹೋದೆವು. ಗೂಗಲ್ ಅನುವಾದಕದಂತಹ ಒಂದು ಆ್ಯಪ್ ಬಳಸಿ ನಮ್ಮ ಭಾಷೆಯನ್ನು ಅರ್ಥಮಾಡಿಕೊಂಡು ರುಚಿಯಾದ ಖಾದ್ಯಗಳನ್ನು ನೀಡಿದರು. ಕೊನೆಯಲ್ಲಿ ‘ಟಿಪ್ಸ್’ ಕೊಡಲು ಹೋದಾಗ ಖಡಾಖಂಡಿತವಾಗಿ ನಿರಾಕರಿಸಿದರು. ಅದೊಂದು ರೀತಿಯ ಅವಮಾನವೇನೋ ಎನ್ನುವ ಮುಖಭಾವ ತೋರಿಸಿ ಹೊರಗೆ ಕಳಿಸಿದರು.

ಭಾರತದಂತೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಬೇಡಿಕೆ ಸಲ್ಲಿಸದೆ, ಅಮೆರಿಕನ್ನರಂತೆ ಒರಟಾಗಿ ಗಟ್ಟಿಸಿ ಕೇಳದೆ, ಕೊಟ್ಟರೆ ತೆಗೆದುಕೊಳ್ಳುವ, ಇಲ್ಲದಿದ್ದರೂ ಥ್ಯಾಂಕ್ಸ್ ಹೇಳುವ ಬ್ರಿಟಿಷರಿಗಿಂತ ಬಹಳ ಭಿನ್ನವಾಗಿ ಪ್ರವಾಸೀ ಗೈಡ್ ಕೂಡ ಒಂದು ಪೈಸೆ ಹಣವನ್ನು ಸ್ವೀಕರಿಸಲಿಲ್ಲ. ಟ್ಯಾಕ್ಸಿ ಡ್ರೈವರ್‌ಗಳು ಕೂಡ ಭಕ್ಷೀಸಿಗೆ ಆಸೆ ಪಡಲಿಲ್ಲ. ಆದರೆ ಸ್ಥಳೀಯರು ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ಮತ್ತು ಅತ್ಯಂತ



ಬಿಬಿಂಬಾಪ್ ಎಂಬ ಕೊರಿಯನ್ ಖಾದ್ಯ